**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.33/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ರವಿ |
| ತಂದೆಯ ಹೆಸರು | : | ಜಂಗ ಬಹುದ್ದೂರ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಪೋಟೋಗ್ರಾಫರ್ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 7

ಸಿ.ಡಬ್ಲ್ಯೂ 4

ದಿ: 29-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ನಾನು 10 ವರ್ಷಗಳಿಂದ ಪೋಟೋಗ್ರಾಫರ್ ಆಗಿ ಕೆಲಸ ಮಾಡುತ್ತಿದ್ದೇನೆ. ಈಗ ನನಗೆ ತೋರಿಸಿದ ನಿಪಿ-3 ಮತ್ತು 4 ರಲ್ಲಿ ನಾನು, ಚಾಸಾ-1, ಚಾಸಾ-5 ಮತ್ತು ಪೊಲೀಸ್ ಮೇಡಮ್ ರವರು ಇದ್ದೇವೆ. ನನಗೆ ಈಗ ತೋರಿಸಿದ ನಿಪಿ-2 ರಲ್ಲಿ ನನ್ನ ಸಹಿಯನ್ನು ನಿಪಿ-2(ಬಿ) ಅಂತ ಗುರುತಿಸಲಾಯಿತು. ನಿಪಿ-2 ಕ್ಕೆ ನಾನು ದಿಃ 22-09-2022 ರಂದು 12.00-1.00 ಗಂಟೆ ಸಮಯದಲ್ಲಿ ಚಾಕು ಹಾಕಿದ ಗಲಾಟೆ ವಿಚಾರದಲ್ಲಿ ದಾವಣಗೆರೆಯ ಹೈಸ್ಕೂಲ್ ಮೈದಾನದಲ್ಲಿ ಸಹಿ ಮಾಡಿದ್ದೇನೆ. ಆನಂದರವರು ಗಲಾಟೆ ಆದ ಸ್ಥಳವನ್ನು ಪೊಲೀಸರಿಗೆ ತೋರಿಸಿದರು. ಈಗ ನನಗೆ ತೋರಿಸಿದ ನಿಪಿ-3 ಮತ್ತು 4 ರಲ್ಲಿ ಮು.ಮಾ.1 ಮತ್ತು 2 ಕಂಡು ಬರುತ್ತವೆ. ಇವುಗಳನ್ನು ಚಾಸಾ-1 ರವರು ಕೊಟ್ಟಿರುತ್ತಾರೆ. ಅದಕ್ಕೆ ರಕ್ತದ ಕಲೆ ಇದ್ದು, ಆದ್ದರಿಂದ

ಅವುಗಳನ್ನು ಪೊಲೀಸರಿಗೆ ಕೊಟ್ಟರು. ನಿಪಿ-4 ರಲ್ಲಿ ಚಾಸಾ-1 ರವರು ಜಾಗವನ್ನು ತೋರಿಸುತ್ತಿರುವ ಬಗ್ಗೆ ಕಂಡು ಬರುತ್ತದೆ. ಮು.ಮಾ.1 ಮತ್ತು 2 ನ್ನು ಸಾಕ್ಷಿದಾರರು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಶ್ರೀ ಎಸ್.ಜೆ.ಕೆ., ವಕೀಲರಿಂದ ಆರೋಪಿತರ ಪರವಾಗಿ**:

2. ಪೋಟೋಗ್ರಾಫಿ ಬಗ್ಗೆ ನಾನು ಡಿಪ್ಲೋಮಾ ಮಾಡಿಲ್ಲ. ನನ್ನದು ಸ್ವಂತ ಕ್ಯಾಮರಾ ಇಲ್ಲ ಬಾಡಿಗೆ ಕ್ಯಾಮರಾ ಇಟ್ಟುಕೊಂಡಿದ್ದೇನೆ. ಸರ್ಕಾರಿ ಕ್ಯಾಮರಾ ಇಲ್ಲ. ನನಗೆ ಚಾಸಾ-1 ರವರು ಆ ದಿನ ನನ್ನನ್ನು ಕರೆಸಿದ್ದರು. ಹೈಸ್ಕೂಲ್ ಮೈದಾನದ ಆಸ್ತಿ ಸಂಖ್ಯೆ ಎಷ್ಟು ಮತ್ತು ಅದರ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಅದು ಪೂರ್ತಿ ಖಾಲಿ ಜಾಗ ಇರುತ್ತದೆ. ಆ ಹೈಸ್ಕೂಲ್ ಮೈದಾನದಲ್ಲೇ ಪೊಲೀಸ್ ಠಾಣೆಗೆ ಕಡೆಗೆ ಈ ಗಲಾಟೆ ಆಗಿರುತ್ತದೆ. ಅದು ಜನನಿಬೀಡ ಪ್ರದೇಶ ಅಂದರೆ ನಿಜ. ಪೊಲೀಸರು ಅಲ್ಲಿನ ಸ್ಥಳೀಯರನ್ನು ಪಂಚನಾಮೆಗೆ ಕರೆಸಿಲ್ಲ. ನಿಪಿ-3 ಮತ್ತು 4 ರ ಪ್ರಿಂಟಔಟ್ ನ್ನು ನಾನು ತೆಗೆಸಿಲ್ಲ. ಬೇರೆ ಎಲ್ಲೋ ತೆಗೆದಂತಹ ಪೋಟೋವನ್ನು ಅದೇ ಘಟನಾ ಸ್ಥಳ ಅಂತ ತೋರಿಸಿದ್ದೇವೆ ಅಂದರೆ ಸರಿಯಲ್ಲ. ಮು.ಮಾ.1 ಮತ್ತು 2 ರ ಮೇಲೆ ಮಾನವನ ರಕ್ತದ ಕಲೆಗಳು ಇರುವುದಿಲ್ಲ ಅಂದರೆ ಸರಿಯಲ್ಲ.

3. ಈಗ ನನಗೆ ತೋರಿಸಿದ ನಿಪಿ-2 ರ ಮುಂಭಾಗದಲ್ಲಿ ದಿಃ 21-09-2022 ರಂದು ಅಂತ ಇದೆ ಅಂದರೆ ನಿಜ. ನಿಪಿ-2 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಮು.ಮಾ.1 ಮತ್ತು 2 ರಂತಹ ಟಿ-ಶರ್ಟ್ ಮತ್ತು ಬನಿಯನ್ ಎಲ್ಲರ ಮನೆಯಲ್ಲೂ ಇರುತ್ತವೆ ಅಂದರೆ ನಿಜ. ಪಂಚನಾಮೆಯಲ್ಲಿ ಬರೆದಿರುವ ಘಟನಾ ಸ್ಥಳದ ಚಕ್ಕುಬಂದಿ ನಾನು ಹೇಳಿ ಬರೆಸಿಲ್ಲ. ನಿಪಿ-2 ರ ಪಂಚನಾಮೆಯನ್ನು ಮಾಡಿದ್ದು ಸುಳ್ಳು ಅಂದರೆ ಸರಿಯಲ್ಲ. ನಿಪಿ-3 ಮತ್ತು 4 ರಲ್ಲಿ ಮಂಡಕ್ಕಿ ಗಾಡಿಯಾಗಲಿ, ದೋಸೆ ಗಾಡಿ ಕಾಣುತ್ತಿಲ್ಲ ಅಂದರೆ ಪೋಟೋದಲ್ಲಿ ಇಲ್ಲ. ಸಾಕ್ಷಿದಾರರು ಹೇಳುತ್ತಾರೆ ಹಿಂಬದಿಯಲ್ಲಿ ಇದೆ. ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.